ಶ್ರೀ ಎಂ ರಾಮಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಮುನ್ಸಿಪಾಲಿಟಿ ಬಗ್ಗೆ ತಂದ ಬಂದು ವಿಷಯದ ಬಗ್ಗೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.— ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀಮತಿ ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೆ, ನಾನು ಒಂದು ಹಕ್ಕುಚ್ಯುತಿ ಬಗ್ಗೆ ಸೂಚನೆಯನ್ನು ಕಳುಹಿಸಿದ್ದೆನು.

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೆ, ಆ ವಿಷಯವನ್ನು ನಾಳೆ ತೆಗೆದುಕೊಳ್ಳಿ. ಅವರು ಮೈಯಲ್ಲಿ ಹುಶಾರಿಲ್ಲ ಎಂದು ಹೇಳಿ ತಿಳಿಸಿದ್ದಾರೆ...

ಅಧ್ಯಕ್ಷರು.— ಹಾಗಾದರೆ ಅವರು ನಾಳೆ ಬಂದ ಮೇಲೆ ಈ ವಿಚಾರವನ್ನು ತಗೆದುಕೊಳ್ಳೋಣ. ಈಗ ಆರ್. ಎನ್. ನಾಯ್ಕರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸ ಬಹುದು.

೪–೦೦ ಪಿ.ಎಂ.

ಶ್ರೀ ಆರ್. ಎನ್. ನಾಯಂಕ್.— ಅಧ್ಯಕ್ಷರೇ ಸಚಿವರು ಯಾರೂ ಇಲ್ಲವಲ್ಲ.

ಶ್ರೀ. ಎ. ಲಕ್ಷ್ಮೀಸಾಗರ್.— ಆ ಕಡೆಯವರಿಗೆ ಏನಾಗಿದೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಧ್ಯಕ್ಷರೇ ಬರುತ್ತಾ ಬರುತ್ತಾ ಇವರ ಬಾಯಿ ಜಾಸ್ತಿ ಯಾಯಿತು, ಇವರಿಗೇನಾಗಿದೆ ಎಂದು ಕೇಳುತ್ತಾರೆ, ಹಾಗೆಂದರೆ ಏನರ್ಥ?

ಶ್ರೀ. ಎ. ಲಕ್ಷ್ಮೀಸಾಗರ್.— ನಾವೆಲ್ಲ ಸಚಿವರು ಇಷ್ಟೊಂದು ಜನ ಇದ್ದರೂ ಯಾರೂ ಇಲ್ಲ ಎಂದು ಅವರು ಹೇಳಿದ್ದುದು ಸರಿಯೇ ?

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೇ ಲಕ್ಷ್ಮೀಸಾಗರ್ ಅವರಿಗೆ ದೃಷ್ಟಿ ಕಡಿಮೆ ಇದೆ. ಇವರು ಕನ್ನಡಕವನ್ನು ಬದಲಾಯಿಸಿಕೊಳ್ಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಬ್ಬರು ಎದ್ದರೆ ಎಲ್ಲರೂ ಎದ್ದು ನಿಲ್ಲಬೇಕು. ನಿರ್ಣಯವೊಂದು ಆದ ಹಾಗೆ ಕಾಣುತ್ತಿದೆ.

ಗಮನ ಸೆಳೆಯುವ ಸೂಚನೆ

1) ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರುವ ಪ್ರೌಢ ಶಾಲಾ ಶಿಕ್ಷಕರನ್ನು ನ್ಯಾಯ ಬಾಹಿರವಾಗಿ ವರ್ಗಾಯಿಸುತ್ತಿರುವುದು

ಶ್ರೀ ಆರ್. ಎನ್. ನಾಯಕ್,— ಅಧ್ಯಕ್ಷರೇ, ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಶಿಕ್ಷಕರನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರುವುದರಿಂದ ನ್ಯಾಯ ಬಾಹಿರವಾಗಿ ವರ್ಗಾಯಿಸುತ್ತಿರುವುದರಿಂದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರೌಢ ಶಿಕ್ಷಣ ಸಚಿವರು).— ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಬಗ್ಗೆ ವಿಭಾಗೀಯ ಸಹ ನಿರ್ದೇಶಕರು, ಸಕ್ಷಮ ಅಧಿಕಾರಿಗಳಾಗಿದ್ದು, ಇದುವರೆವಿಗೂ ವಿಭಾಗೀಯ ಹಂತದಲ್ಲೇ ಮಾಡುತ್ತಲಿದ್ದಾರೆ. ೧೯೮೮–೮೯ನೇ ಸಾಲಿನಲ್ಲಿ ಬಂದಿದ್ದ ವರ್ಗಾವಣೆಗಳ ಅನುಮತಿಯನ್ನು ಆಯಾಯಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಆಯುಕ್ತರು ಕಳುಹಿಸಿ ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್ ಕಾಯ್ದೆ ಬಂದ ಮೇಲೆ ಪ್ರಾಥಮಿಕ ಪಂಥ್ತು ಪ್ರೌಢ ಶಿಕ್ಷಣದ ನಿರ್ವಹಣಾ ಕಾರ್ಯವು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ. ಜಿಲ್ಲಾ ಪರಿಷತ್ ಪ್ರೌಢ ಶಾಲಾ ಶಿಕ್ಷಕರನ್ನು ಮನ ಬಂದಂತೆ ವರ್ಗಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೇ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಬರುತ್ತವೆ ಎಂದು ಇದರಲ್ಲಿ ಒಂದು ವಾಕ್ಯ ಸೇರಿಸಿದ್ದಾರೆ. ಇದರಲ್ಲಿ ಶಿಕ್ಷಕರನ್ನು ವರ್ಗಾಯಿಸುವವರು ಯಾರು. ಅದಕ್ಕೆ ಸಹಿ ಹಾಕುವವರು ಜಿಲ್ಲಾ ಪರಿಷತ್ ಕಾರ್ಯದರ್ಶಿಗಳೋ ಅಥವಾ ಡಿಡಿಪಿಐಯೋ ಎಂದು ತಿಳಿಸಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸ್ಥಾಯಿ ಸಮಿತಿ ಅಧ್ಯಕ್ಷ ಟಿಎಂ ಹೆಗಡೆ ಎಂಬ ಒಬ್ಬರು ಡಿಡಿಪಿಐ ಆಫೀಸಿಗೆ ಹೋಗಿ ಒಂದು ತಿಂಗಳಿಂದ ಕೂತು ಒಬ್ಬ ಇನ್ಸ್‌ಪೆಕ್ಟರ್ ಸಹಾಯದಿಂದ ವರ್ಗಾವರ್ಗಿ ಮಾಡಿಸಿಕೊಂಡು ಬಂದು ಹೋದವರ ಹತ್ತಿರ ಎಲ್ಲ ಮಾತನಾಡಂವುದು ನಡೆಯುತ್ತಿದೆ. ಅದೇನಾದರೂ ನಿಮ್ಮ ಗಮನಕ್ಕೆ ಬಂದಿದೆಯೇ ? ಈ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ವರ್ಗಾವರ್ಗಿ ಲಿಸ್ಟ್ ಮಾಡುವುದಕ್ಕೆ ಡಿಡಿಪಿಐ ಆಫೀಸಿಗೆ ಹೋಗುವುದಕ್ಕೆ ಲಿಸ್ಟ್‌ಗೆ ಸಹಿ ಹಾಕುವುದಕ್ಕೆ ಅಧಿಕಾರ ಇದೆಯೇ ಹಾಗಾದರೆ ಡಿಡಿಪಿಐ ಏಕೆ ಇದ್ದಾರೆ ? ಇವಕ್ಕೆಲ್ಲ ಉತ್ತರ ಕೊಡಿ,

ಶ್ರೀ ಸೋಮಶೇಖರ್ (ಪ್ರಾಥಮಿಕ ಶಿಕ್ಷಣ ಸಚಿವರು).— ಜಿಲ್ಲಾ ಪರಿಷತ್ತಿನ ಕಾನೂನು ರೀತ್ಯಾ ಜಿಲ್ಲಾ ಪರಿಷತ್ತಿನ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ವರ್ಗಾವಣೆ ಮಾಡಲು ಅಧಿಕಾರ ಇದೆ. ಉಪ ನಿರ್ದೇಶಕರು ಅವರೊಡನೆ ಸಹಕರಿಸುವುದು ಕಾನೂನು ಬಾಹಿರವಲ್ಲ. ಈ ಸ್ಥಾಯಿ ಸಮಿತಿ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಅದನ್ನು ಅನುಷ್ಠಾನಕ್ಕೆ ತರತಕ್ಕಂಥಹ ಕರ್ತವ್ಯ. ಉಪ ನಿರ್ದೇಶಕರದ್ದು. ಆ ಹುದ್ದೆ ಇರಬಾರದೆಂದು ಹೇಳತಕ್ಕಂಥಾದ್ದು ಸರಿಯಲ್ಲ ಅವರು ಜಿಲ್ಲಾ ಮಟ್ಟದ ಅಧಿಕಾರಿಯಾಗಿರುತ್ತಾರೆ.

ಶ್ರೀ ಆರ್, ಎನ್. ನಾಯಕ್.— ಉತ್ತರ ಕನ್ನಡ ಜಿಲ್ಲೆಯಲ್ಲಿ ಟಿ. ಎಂ. ಹೆಗಡೆ ಎಂಬುವರು ಡಿ.ಡಿ.ಪಿ.ಐ. ಆಫೀಸಿಗೆ ಹೋಗಿ ಶ್ರೀ ಜಿ. ಕೆ. ಭಟ್ ಇನ್ಸ್‌ಪೆಕ್ಟರ್‌ರವರ ಸಹಾಯದಿಂದ ಟ್ರಾನ್ಸ್‌ಫರ್ ಮಾಡಿಸುವಂತಾದ್ದು ನಡೆಯುತ್ತಿದೆ. ಹೆಗಡೆಯವರು ಹೋಗಿ ಅಲ್ಲಿ ಕಮೀಷನರ್ ಕಚೇರಿಯಲ್ಲಿ ಕುಳಿತು ವರ್ಗಾವಣೆಯನ್ನು ಮಾಡುವುದಕ್ಕಾಗುತ್ತದೆಯೇ? ಹಾಗಿದ್ದರೆ ತಾವು ಹೋಗಿ ಕಮೀಷನರ್‌ರವರ ಕಚೇರಿಯಲ್ಲಿ ಕುಳಿತುಕೊಂಡು ಏಕೆ ವರ್ಗಾ ವರ್ಗಿ ಮಾಡಬಾರದು ? ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ನಾನು ಇದನ್ನು ಕಂಪೇರ್ ಮಾಡಿದ್ದೇನೆ ಅಷ್ಟೇ. ತಾವು ಮಂತ್ರಿಗಳಾಗಿದ್ದರೂ ಕೂಡ ಅಲ್ಲಿ ಹೋಗಿ ನೀವು ವರ್ಗಾವರ್ಗಿ ಮಾಡುವುದಕ್ಕಾಗುವುದಿಲ್ಲ, ನೋಟ್ ಕಳಿಸಬಹುದು ಮತ್ತೊಂದು ಮಾಡಬಹುದು ನೀವೇ ಹೋಗಿ ಮಾಡುವುದಕ್ಕಾಗುವುದಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಸಾಧ್ಯವಿದೆಯೇ ಹೇಗೆ ? ವರ್ಗಾವರ್ಗಿಗೆ ಯಾರು ಸಹಿ ಮಾಡಬೇಕು ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ. ಸೋಮಶೇಖರ್.— ವರ್ಗಾವರ್ಗಿಯ ಬಗ್ಗೆ ಹೇಳುವುದಾದರೆ, ಯಾವ ಮಂತ್ರಿಯೇ ಆಗಲೀ ಆದೇಶ ಹೊರಡಿಸಬೇಕಾದರೆ ಆದಕ್ಕೆ ನಾನು ಸಹಿ ಮಾಡಿದರೆ ಊರ್ಜಿತವಾಗುವುದಿಲ್ಲ ಅದಕ್ಕೆ ಕಾರ್ಯದರ್ಶಿಗಳ ಸಹಿ ಆಗಬೇಕು. ಅವರಿಂದ ಹೊರಟಿದ್ದೇ ಆದೇಶ, ಜಿಲ್ಲಾ ಪರಿಷತ್ತಿನ ಸ್ಥಾಯಿ ಸಮಿತಿಯಲ್ಲಿ ಆದೇಶ ಹೊರಡಿಸತಕ್ಕಂತಹವರು ಮುಖ್ಯ ಕಾರ್ಯದರ್ಶಿಯವರು. ಅಧ್ಯಕ್ಷರು ತೀರ್ಮಾನ ತೆಗೆದುಕೊಂಡರೂ ಕೂಡ ಅವರು ಹೊರಡಿಸುವುದಿಲ್ಲ. ಟಿ. ಎಂ. ಹೆಗಡೆಯವರು ಆದೇಶ ಹೊರಡಿಸುವುದಕ್ಕೆ ಬರುವುದಿಲ್ಲ. ಶಿಕ್ಷಣ ಇಲಾಖೆಯು ಉಪ ನಿರ್ದೇಶಕರು ಹೊರಡಿಸುತ್ತಾರೆ, ಮಾನ್ಯ ಸದಸ್ಯರು ಏನು ಆರೋಪಗಳನ್ನು ಅವರ ಮೇಲೆ ಮಾಡಿದ್ದಾರೆ ಅದು ನನ್ನ ಇಲಾಖೆಗೆ ಬರುವುದಿಲ್ಲ ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಬರುತ್ತದೆ ತಾವು ಬೇರೆ ಪ್ರಶ್ನೆ ಹಾಕಿದರೆ ಆ ಮಂತ್ರಿಗಳು ಉತ್ತರ ನೀಡುತ್ತಾರೆ.

ಶ್ರೀ ಆರ್ ಎನ್. ನಾಯಕ್.—ಹಾಗೆ ಹೇಳುವುದಕ್ಕಾಗುವುದಿಲ್ಲ. ಶಿಕ್ಷಣದ ಜವಾಬ್ದಾರಿಯನ್ನು ನೀವು ಹೊತ್ತಿದ್ದೀರಿ. ಜಿಲ್ಲಾ ಪರಿಷತ್ತಿನ ಸದಸ್ಯರಾದ ಟಿ.ಎಂ. ಹೆಗಡೆಯವರು ಅಲ್ಲಿಗೆ ಹೋಗಿ ಟ್ರಾನ್ಸ್‌ಫರ್ ಮಾಡಿದರೆ ಹೇಗೆ ? ನೀವು ಇದರ ಬಗ್ಗೆ ಕಂಟ್ರೋಲ್ ಇರಬೇಕು ಅದನ್ನು ಬಿಟ್ಟು ನನಗೆ ಸಂಬಂಧವಿಲ್ಲವೆಂದು ಹೇಳಿದರೆ ಹೇಗೆ ? ನಾನು ನೇರವಾದ ಆಪಾದನೆ ಮಾಡುತ್ತಿದ್ದೇನೆ. ಈ ವ್ಯವಹಾರವನ್ನು ಅವರು ನಡೆಸುತ್ತಿದ್ದಾರೆ ಎಂದು.

ಶ್ರೀ ಬಿ. ಸೋಮಶೇಖರ್.—ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಅಧಿಕಾರ ಚಲಾಯಿಸುವಾಗ ನಾವೇಕೆ ಅಡ್ಡ ಬರಬೇಕು.

ಶ್ರೀ ಆರ್. ಎನ್. ನಾಯಕ್.—ಅವರು ಡಿಡಿಪಿಐ ಕಚೇರಿಗೆ ಹೋಗಿ ಅಲ್ಲಿ ಕುಳಿತು ಕಡತಗಳನ್ನು ನೋಡುವುದಕ್ಕೆ, ಹಾಗೂ ಕಡತವನ್ನು ಪರಿಶೀಲಿಸುವುದಕ್ಕೆ ಆಗುತ್ತದೆಯೇ ? ತಾವೂ ಕೂಡ ಅಲ್ಲಿಗೆ ಹೋಗಿ ಕುಳಿತು ಕಡತವನ್ನು ನೋಡುವುದಕ್ಕಾಗುವುದಿಲ್ಲ. ಮಿನಿಟ್, ನೋಟ್ ಮುಂತಾದವನ್ನು ಕಳಿಸಬಹುದು. ಅವರು ತಮ್ಮ ಮನೆಯಲ್ಲಿ ಕುಳಿತುಕೊಂಡು ಬೇಕಿದ್ದರೆ ಆದೇಶಗಳನ್ನು ಕಳಿಸಬೇಕು ಅದನ್ನು ಬಿಟ್ಟು ಇಲ್ಲಿ ಬಂದು ಅವರ ಹತ್ತಿರ ವ್ಯವಹಾರ ನಡೆಸುವುದಲ್ಲ. ಅವರು ಈ ರೀತಿಯ ವ್ಯವಹಾರವನ್ನು ನಡೆಸುತ್ತಿದ್ದಾರೆಂದು ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಈ ವ್ಯವಹಾರದ ಬಗ್ಗೆ ತಾವು ಕ್ರಮ ಕೈಗೊಳ್ಳದೇ ಹೋದರೆ ನಾನು ನಿಮ್ಮ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ನೀವೂ ಕೂಡ ಅದಕ್ಕೆ ಸಪೋರ್ಟ್ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಇವೊತ್ತು ಡಿಮ್ಯಾಂಡ್ಸ್ ಇದೆ ತಾವೂ ಕೂಡ ಮಾತನಾಡುವರಿದ್ದೀರಿ ಇನ್ನೂ ಎಷ್ಟು ಹೊತ್ತು ಇದನ್ನು ಮುಂದುವರಿಸುತ್ತೀರಿ ಬೇಗ ಮುಗಿಸಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನೇರವಾಗಿ ಕೇಳುತ್ತಿದ್ದಾರೆ ನೇರವಾಗಿ ಉತ್ತರ ಕೊಡದೇ ಹೋದರೆ ಹೇಗೆ ? ಇಂತಹ ವ್ಯವಹಾರ ನಡೆಯುತ್ತಿದೆ ಆವರನ್ನು ಹತೋಟಿಯಲ್ಲಿಡಿ ಎಂದೂ ಹೇಳುತ್ತಿದ್ದಾರೆ. ಅದನ್ನು ತಡೆಗಟ್ಟುತ್ತೇವೆಂದು ಹೇಳಿದ ನನಗೆ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ಡಿ.ಡಿ.ಪಿ.ಐ.ಗೆ ಸಂಬಂಧಪಟ್ಟವರು ನೀವು. ಆಗ ಇಂತಹ ವ್ಯವಹಾರ ನಡೆಯುತ್ತಿದೆ. ಅದನ್ನು ನಿಲ್ಲಿಸಿ ಎಂದು ಹೇಳುತ್ತಿದ್ದಾರೆ,

ಶ್ರೀ ಬಿ. ಸೋಮಶೇಖರ್.—ಜಿಲ್ಲಾ ಪರಿಷತ್ತಿನಲ್ಲಿ ಏನಾದರೂ ವ್ಯವಹಾರವಾಗಿದ್ದರೆ, ರೂರಲ್ ಡೆವಲಪ್‌ಮೆಂಟ್‌ಗೆ ಬರುತ್ತದೆ. ಜಿಲ್ಲಾ ಪರಿಷತ್ತಿನ ಸದಸ್ಯರು ಡಿಡಿಪಿಐ ಕಚೇರಿಗೆ ಹೋಗಿ ಅಲ್ಲಿ ಟ್ರಾನ್ಸ್‌ಫರ್ಸ್‌ಗಳನ್ನು ಮಾಡುತ್ತಿದ್ದಾರೆಂದು ತಾವು ಹೇಳುತ್ತಿದ್ದೀರಿ. ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ಉಪ ನಿರ್ದೇಶಕರ ಕಚೇರಿಯಲ್ಲಿ ಈ ರೀತಿಯ ವ್ಯವಹಾರವಾಗಿದ್ದರೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ತಾವು ನಮ್ಮ ಸಹಕಾರಕ್ಕೆ ಬರಬೇಕು. ಸದಸ್ಯರು ಅಲ್ಲಿಗೆ ಹೋಗಿ ಡಿಡಿಪಿಐ ಕಚೇರಿಯಲ್ಲಿ ಕುಳಿತುಕೊಂಡು ಕಡತಗಳನ್ನು ಪರಿಶೀಲಿಸಿ ವರ್ಗಾವರ್ಗಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದು ಆಗುವುದಿಲ್ಲ. ಈ ರೀತಿ ಅವರು ಏನು ವರ್ಗಾವರ್ಗಿ ಕೆಲಸವನ್ನು ನಡೆಸಿದ್ದಾರೆ. ಅವರು ಲಿಸ್ಟ್ ಏನು ಮಾಡಿದ್ದಾರೆ, ಆ ಲಿಸ್ಟನ್ನು ತಡೆಹಿಡಿಯಬೇಕು, ಅದರ ವಿಚಾರಣೆ ಮಾಡುತ್ತೀರಾ ಹೇಳಿ? ಆ ಲಿಸ್ಟನ್ನು ತಡೆಹಿಡಿಯಿರಿ, ಅದನ್ನು ಆನೌನ್ಸ್ ಮಾಡುವುದಕ್ಕೆ ಬಿಡಬೇಡಿ. ಈಗಾಗಲೇ ಸೈಲ್ಪ ಮಾಡಿದ್ದಾರೆ. ಅದನ್ನು ತಡೆಹಿಡಿದು ವಿಚಾರಣೆ ಮಾಡಿಸಿ. ಅವರು ಏನು ಆ ರೀತಿ ಮಾಡಿದ್ದಾರೆ, ಆ ಲಿಸ್ಟನ್ನು ತಡೆಹಿಡಿಯುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ? ಅದರ ಬಗ್ಗೆ ಆಜ್ಞೆಯನ್ನು ಮಾಡುತ್ತೀರಾ ಹೇಳಿ ?

ಶ್ರೀ ಬಿ. ಸೋಮಶೇಖರ್.—ಅವರು ಹೇಳಿರತಕ್ಕಂಥ ವಿಚಾರದ ಬಗ್ಗೆ ವಿಚಾರಣೆ ಮಾಡಿ ಅದರಲ್ಲಿ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇನೆ.

ಅಧ್ಯಕ್ಷರು.—ಮುಂದಿನ ವಿಷಯ ಗವರ್ನರ ಸೆಳಿಯುವ ಸೂಚನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿ.ಡಿ.ಪಿ.ಐ.ಗೆ ನೀವು ಇನ್‌ಸ್ಟ್ರಕ್ಷನ್ ಕೊಡಿ.

ಅಧ್ಯಕ್ಷರು.—ಅವರ ಉತ್ತರವನ್ನು ಕೇಳಿದ್ದೀರಿ ಅಲ್ಲವೇ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಏಕೆಂದರೆ ಟ್ರಾನ್ಸ್‌ಫರ್ ಆರ್ಡರ್ಸ್ ಅಲ್ಲಿ ಮೇಟಲಿ ಡಿಡಿಪಿಐ ನವರೇ ಇಸ್ಯೂ ಮಾಡಿದ್ದುದು ಹೌದೇ ? ಡಿಡಿಪಿಐ ಇಸ್ಯೂ ಮಾಡಬೇಕಾದರೆ ಡಿಡಿಪಿಐಗೆ ಇಲ್ಲಿಂದ ಒಂದು ಕಂಪ್ಲೇಂಟ್ ಹೋಗಿದೆ. ಅದರಲ್ಲಿ ಅವ್ಯವಹಾರ ಕಂಡುಬಂದಿದೆ. ಶಾಸಕರಿಂದ ಕಂಪ್ಲೇಂಟ್ ಬಂದಿದೆ therefore you issue a direction to the LPI to withheld the transfer orders until further orders. You enquire into it.

The D.P.I. will issue directions to DDPI to stop giving effect to it. ಡಿಡಿಪಿಐಗೆ ಇದರಲ್ಲಿ ತೊಂದರೆ ಏನು ಇದ, ಏನು ಕಷ ಇದೆ ಹೇಳಿ. ನಾವು ಇಂಟರ್‌ಫಿಯರ್ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

SRI B. SOMASHEKAR.—Under the Act we cannot give directions to the Zilla Parishads, it is the Government by itself. We have given them powers.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಡಿಪಿಐ ಮಾಡಬೇಕು ಎಂದು ಹೇಳಿದರೆ.....

(ಗೊಂದಲ)

SRI B. SOMASHEKAR.—I cannot give directions to Zilla Parishads.

(INTERRUPTION)

MR. SPEAKER.—I cannot compell the hon. Minister to reply as you like.

ಶ್ರೀ ಆರ್.ಎನ್. ನಾಯಕ್.—ವರ್ಗಾವರ್ಗಿ ಮಾಡಬೇಕು ಎಂದು ಎಲ್ಲಿದೆ ಹೇಳಿ ?

(ಗೊಂದಲ)

ಅಧ್ಯಕ್ಷರು.—ಉತ್ತರವನ್ನು ಅವರು ಹೇಳಿದ್ದಾರೆ.

SRI MALLIKARJUNA KHARGE.—The Government has got every right to supersede even municipalities also. Like wise.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ತೊಂದರೆ ಇದ್ದರೂ ಕೂಡಾ you have got certain powers and you can direct the DDPI. ನಮಗೆ ಅಧಿಕಾರ ಇಲ್ಲ ಎಂದು ಹೇಳುತ್ತಾರೆ. ನಮಗೆ ಅಧಿಕಾರ ಇಲ್ಲ ಎಂದು ಹೇಳಿದರೆ ಗೌರ್ನಮೆಂಟ್ ಏತಕ್ಕೆ ಇರಬೇಕು ? You don't give directions to the Zilla Parishad President. The DDPI is controlled by the DPI. He may be the secretary to the standing Committee. ನಾವು ಜಿಲ್ಲಾ ಪರಿಷತ್ತು ಪ್ರೆಸಿಡೆಂಟರಿಗೆ ಡೈರೆಕ್ಷನ್ ಕೊಡಬೇಕು ಎಂದು ಹೇಳಿದ್ದೇವೆಯೇ ? ಡಿಡಿಪಿಐ ಆಫೀಸ್‌ನಲ್ಲಿ ಅವ್ಯವಹಾರ ನಡೆದಿದೆ. If you give directions to the DPI definitely he will stop giving effect to it. ನೀವು ಇನ್ಸ್‌ಟ್ರಕ್ಷನ್ ಕೊಟ್ಟರೆ ಅದರಲ್ಲಿ ನಮಗೆ ಏನೋ ಸ್ವಲ್ಪ ಕಂಪ್ಲೇಂಟ್ ಬಂದಿದೆ ಎಂದು ಹೇಳಿ ಅವರಲ್ಲಿ ಕೇಳಿಕೊಂಡರೆ ಡೆಫನೇಟ್‌ಲಿ.....

(ಗೊಂದಲ)

ಅಧ್ಯಕ್ಷರು.—ಚಿನ್ನಪ್ಪನವರೇ ತಾವು ಕುಳಿತುಕೊಳ್ಳಿ, ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಬಿಟ್ಟು ಅಧಿಕಾರ ಇಲ್ಲ ಎಂದು ಹೇಳಿದರೆ ಸರ್ಕಾರ ಏತಕ್ಕೆ ಇರಬೇಕು ?

ಅಧ್ಯಕ್ಷರು.—ಇನ್ನೊಮ್ಮೆ ಅವರಿಗೆ ಉತ್ತರ ದೇಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮುನಿಸಿಪಾಲಿಟಿಗೆ ಪೋಕಾಷ್ ನೋಟೀಸ್ ಕೊಡತಕ್ಕಂಥದ್ದು ಸೀಮಿತವಾಗಿರತಕ್ಕಂಥ ಪ್ರದೇಶದಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟ್ರಾನ್ಸ್‌ಫರ್ ಆರ್ಡರ್‌ಗೆ ಇನ್ಸ್‌ಟ್ರಕ್ಷನ್.....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಪ್ರಶ್ನೆ ಕೇಳಿದ್ದೀರಿ ದಯವಿಟ್ಟು ಕೇಳಿ. Under the Zilla Parishads Act the power of the Government is limited and should be used under very extraordinary circumstances as indicated in the Act. There are specific Provisions so far as municipalities and corporations are concerned as to when they can be superseded. There cannot be any analogy between the two. Anyway, I request the Minister to look into the matter and see what best can be done about it.

(*Interruption*)

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಕೇಳಿ.

SRI A. LAKSHMISAGAR.—I am requesting my friend to look into this matter and see what best could best be done.

ಶ್ರೀ ಆರ್. ಎನ್. ನಾಯಕ್.—ಸಿಕ್ಕಾಪಟ್ಟೆ ದುಡ್ಡನ್ನು ತಿಂದು ಟ್ರಾನ್ಸ್‌ಫರ್ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಇಲ್ಲಿ ಕೇಳಿ, ತಾವು ಕುಳಿತುಕೊಳ್ಳಿ ಇದೇ ತರಹ ಸಭೆ ನಡೆಯಲು ಸ್ವಾಮಿ ರಾವ್, ಚನ್ನಪ್ಪನವರು, ಕಾನಡೆಯವರು. ಅಡ್ಡಿ ಮಾಡಿದರೆ ತಮ್ಮ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತೇನೆ, ನಿಮ್ಮ ಲೀಡರ್‌ಗೆ ಅಲೋ ಮಾಡಿದ್ದೇನೆ, ಅವರು ಮಾತನಾಡಲಿ, ಪಾಲ್ಗು ಪಟ್ಟು ಕೇಳಲಿ. I will allow the Dy. Leader of the opposition. ನಿಮಗೆ ಸಂಬಂಧ ಇಲ್ಲ. ಕಾಲಿಂಗ್ ಅಟೆನ್‌ಷನ್‌ನಲ್ಲಿ ತಾವು ಸಹಿ ಕೂಡ ಮಾಡಿಲ್ಲ ಖರ್ಗೆಯವರು ಕೇಳಲಿ. I have to name you and send you out.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊನೆಗೆ ಇಷ್ಟಾದರೂ ಮಾಡಿಸುತ್ತಿರಾ ನಾವು ಅಲ್ಲಿ ನಡೆದಿರ ತಕ್ಕಂಥ ಕರಪ್‌ಷನ್ ಅನ್ನು ಕಣ್ಣು ಮುಚ್ಚಿಕೊಂಡು ನೋಡುವುದಕ್ಕೆ ಆಗುವುದಿಲ್ಲ. ಸ್ಪೆಸಿಫಿಕ್ ಆಗಿ ಹೇಳಿದ್ದೇವೆ ಅಲಿಗೇಷನ್ ಮಾಡಿದ್ದಾರೆ. ಹೆಸರನ್ನೂ ಕೂಡ ಹೇಳಿದ್ದೇನೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಡಿ.ಡಿ.ಪಿ.ಐ.ಗೆ ಹೇಳ through DPI ಆ ಲಿಸ್ಟನ್ನು ವಿತ್‌ಹೋಲ್ಡ್ ಮಾಡಿಸಿ, Further enquiry.....ಆಗುವ ತನಕ ವಿತ್‌ಹೋಲ್ಡ್ ಮಾಡಿಸಿ. It is only a transfer list.

(ಗೊಂದಲ)

ಅಧ್ಯಕ್ಷರು.—ಮಾನ್ಯ ಚನ್ನಪ್ಪನವರೇ ಇದು ನಿಮಗೆ ಸಂಬಂಧ ಇಲ್ಲ, ಖರ್ಗೆಯವರಿಗೆ ಸಂಬಂಧಿಸಿದ್ದು I may have to name you if you interfere.

SRI A. LAKSHMI SAGAR.—We will look into it.

ಶ್ರೀ ಎಸ್. ಆರ್ ಬೊಮ್ಮಾಯಿ.—ಎಲ್ಲರಿಗೂ ಗೊತ್ತಿದೆ, ಜಿಲ್ಲಾ ಪರಿಷತ್ ಕಾನೂನು ಪ್ರಕಾರ, ಅಧಿಕಾರಗಳನ್ನು ಅವರಿಗೆ ಕೊಟ್ಟಿದ್ದೇವೆ, ಕರಪ್‌ಷನ್ ಚಾರ್ಜಸ್ ಬಗ್ಗೆ ಹೇಳಿದ್ದೀರಿ. The Minister will ask the Chief Secretary of the ZillaParishad who is the executive to enquire into the matter and get a report. ಸಲಹೆ ಕೊಡುತ್ತೇನೆ. ಆ ಮೇಲೆ ಇದು ಏನು ಆಗಿದೆ ಅಂದರೆ ಇದು ಒಂದು ಹೊಸ ವ್ಯವಸ್ಥೆ. ಇದು ನಾರ್ತ್ ಕೆನರಾದಲ್ಲಿ ಆಗಿರಬಹುದು, ಸೌತ್ ಕೆನರಾದಲ್ಲೂ ಆಗಬಹುದು ಜಿಲ್ಲಾ ಪರಿಷತ್‌ಗೆ ಅಧಿಕಾರ ಕೊಟ್ಟಿದ್ದೇವೆ. ಏನಾದರೂ ತಪ್ಪುಗಳು ಆದರೆ ಆಪಾದನೆಗಳು ಬಂದಾಗ We will ask the Chief Secretary of the Zilla Parishad to examine and send a report to the Government.

SRI M. MALLIKARJUNA KHARGE.—Till then. don't give effect to that list.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ನೋಡಿ ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ, ಸಲಹೆಯನ್ನು ತಾವು ಕೊಡಿ, ಅದನ್ನು ಕಳಿಸುತ್ತೇವೆ, ತಮ್ಮಲ್ಲಿ ಒಂದು ವಿಜ್ಞಾಪನೆ ಮಾಡುತ್ತಿದ್ದೇನೆ ತಾವು ಕೂಡ ಜಿಲ್ಲಾ ಪರಿಷತ್ ಸದಸ್ಯರು ಆಲ್ಲಿ ಇಂತಹ ವಿಚಾರಗಳು ಬಂದಾಗ ಜಿಲ್ಲಾ ಪರಿಷತ್ ಸಭೆಯಲ್ಲಿ ಇದನ್ನು ಎತ್ತಬೇಕು, ಮಾರ್ಗದರ್ಶನ ಮಾಡಬೇಕು, ತಪ್ಪುಗಳು ಆಗಿದ್ದರೆ ಅದನ್ನು ತಡೆಗಟ್ಟಬೇಕು.

ಶ್ರೀ ಆರ್. ಎನ್. ನಾಯಕ್.—ಕಳೆದ ವರ್ಷ ಒಂದು ಲಿಸ್ಟ್ ನಾನು ಜಿಲ್ಲಾ ಪರಿಷತ್ ಅಧ್ಯಕ್ಷರ ಮುಂದೆ ತೆಗೆದುಕೊಂಡು ಹೋದಾಗ ಅಲ್ಲಿ ಎಂ ಪಿ.ಗಳೂ ಇದ್ದರು ಈ ರೀತಿ ಮಾಡಿದ್ದಾರೆ, ಇಷ್ಟೆಲ್ಲಾ ತಪ್ಪುಗಳು, ಅವ್ಯವಹಾರ ನಡೆದಿದೆ ಲಂಚ ತಿಂದಿದ್ದಾರೆ ಎಂದು ಹೇಳುವುದಿಲ್ಲ ಆದಂ ಮೂರ್ಖತನ ಆಗುತ್ತದೆ. ಅವ್ಯವಹಾರ ಈ ರೀತಿ ಇದೆ ಸ್ವಾಮಿ ಆದದ್ದು ಆಯಿತು ಮುಂದೆ ಇದು ಹೊಸ ವ್ಯವಸ್ಥೆ ಚೆನ್ನಾಗಿ ನಡೆಸಿಕೊಂಡು ಹೋಗಬೇಕು ಎಂದು ಹೇಳಿದೆ ಈ ರೀತಿ ಮುಂದೆ ಅನ್ಯಾಯ ಆಗಬಾರದು, ಡಿ.ಡಿ.ಪಿ ಐ ಆಫೀಸಿಗೆ ಅವರುಗಳು ಹೋಗಿ ಬೈತ್ತಡ ತರಬಾರದು, ಡಿ.ಡಿ ಪಿ.ಐ. ಆಫೀಸಿನಲ್ಲಿ ಅವರು ಕುಳಿತುಕೊಂಡು ಬರೆಯಬಾರದು ಮತ್ತು ಅಧಿಕಾರಿಗಳನ್ನು ಸಪ್ರೆಸ್ ಮಾಡಬಾರದು ಎಂದು ಹೇಳಿದೆ. If the DDPI Comits a mistake, you have got every right to take action against him. ತಮಗೆ ಅಧಿಕಾರ ಇದೆ ಮೆಂಬರ್ ತಪ್ಪು ಮಾಡಿದ್ದರೆ ಸಸ್ಪೆಂಡ್ ಮಾಡುವುದಕ್ಕೆ ಅಥವಾ ಡಿಸ್‌ಮಿಸ್ ಮಾಡುವುದಕ್ಕೆ ಅಧಿಕಾರ ಇದೆ ಅವರು ಡಿ.ಪಿ.ಐ. ಆಫೀಸಿನಲ್ಲಿ ಕಡತಗಳನ್ನು ಪರಿಶೀಲನೆ ಮಾಡಿ, ಏನಾದರೂ ಬರೆಯುವುದಕ್ಕೆ ಹೋಗಬಾರದು ಎಂಬುದು ನನ್ನ ಮೂಲ ಉದ್ದೇಶ. ಈಗ ಮೆಂಬರ್ ತಪ್ಪು ಮಾಡಿದ್ದರೆ, ಅದನ್ನು ರಿಪೇರಿ ಮಾಡಬಹುದು. ತಮ್ಮ ಪಕ್ಷ ಅಥವಾ ನಿಮ್ಮ ಪಕ್ಷ ಈ ಒಂದು ತರಹ ಮುಲಾಜು ಇರುತ್ತದೆ. ಆದ್ದರಿಂದ ಈ ರೀತಿ ಆಗಬಾರದು ಅವರ ಕೈ ಮೇಲೆ ಆಗುವುದಕ್ಕೆ ಬಿಡಬಾರದಂ. ಡಿ.ಪಿ.ಐ. ಹತೋಟಿಯಲ್ಲಿ ಇರಲಿ. ಡಿ.ಡಿ.ಪಿ ಐ ಸಿಗ್ನೇಚರ್ ಮಾಡಬೇಕಾಗುತ್ತದೆ. ಆದ್ದರಿಂದ ಕಳೆದ ವರ್ಷ ಆದದ್ದು ಆಯಿತು, ಪತ್ರ ಬರೆದಿದ್ದೆ ಈ ವರ್ಷ ನೀವು ಲಿಸ್ಟನ್ನು ೆ ದಿವಸ ಅಥವಾ ೫ ದಿವಸ ವಿತ್‌ಹೋಲ್ಡ್ ಮಾಡಿ, ಪರಿಶೀಲನೆ ಮಾಡಿ ಅಲ್ಲಿ ಸ್ವಜನ ಪಕ್ಷಪಾತ ನಡೆದಿದ್ದರೆ ಅಥವಾ ದುಡ್ಡನ್ನು ತಿಂದು ಅವ್ಯವಹಾರ ನಡೆಯದೆ ಇದ್ದರೆ ವೆಲ್ ಅಂಡ್ ಗುಡ್ ನಮ್ಮ ಜಿಲ್ಲೆಗೆ ಒಳ್ಳೆಯದಾಗಲಿ. ಆದರೆ ಟೀಚರ್ಸ್ ಎಲ್ಲರನ್ನೂ ಹಿಡಿದುಕೊಂಡು ಬರುವುದಕ್ಕೆ ಇಂಪಾಸಿಬಲ್ ಆಗುತ್ತದೆ.

ಇಲ್ಲಿಯವರೆಗೆ ಸುಮಾರು ೮೦೦ ಜನ ಶಿಕ್ಷಕರನ್ನು ವರ್ಗ ಮಾಡಿದ್ದಾರೆ. ಇದರಲ್ಲಿ ನಡೆದಿರುವ ದುಡ್ಡಿನ ವ್ಯವಹಾರವನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಸಮಯ ಬಂದಾಗ ಹೇಳುತ್ತೇನೆ. ನಮ್ಮ ಜಿಲ್ಲೆಯ ಒಳಿತಿಗಾಗಿ ಮತ್ತು ಶಿಕ್ಷಣ ಕ್ಷೇತ್ರದ ಒಳಿತಿಗಾಗಿ ಈಗ ಆಗಿರುವಂತಹ ವರ್ಗಾವಣೆಯನ್ನು ತಡೆಹಿಡಿಯಿರಿ. ಕೊನೆಯ ಪಕ್ಷ ೨ ದಿವಸಗಳ ಕಾಲ ಇದನ್ನು ತಡೆಹಿಡಿದು, ಈ ರೀತಿ ಮಾಡಿರುವುದು ಸರಿಯೇ ಎಂದು ಪರಿಶೀಲನೆ ಮಾಡಿಸಿ ನೋಡಿ. ತಮ್ಮ ವಿದ್ಯಾಮಂತ್ರಿಗಳಿಗೆ ಇದನ್ನು ಹೇಳಿ ಮಾಡಿಸಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ಉದ್ದೇಶ ಒಳ್ಳೆಯದಿದೆ. ಯಾವುದೇ ಒಂದು ಆಜ್ಞೆ ಮಾಡಬೇಕಾದರೆ, ಅದಕ್ಕೆ ಅಧಿಕಾರ ಇರಬೇಕು. ಈಗ ಮಾಡಿರುವಂತಹ ವರ್ಗಾವಣೆಯ ಆರ್ಡರ್‌ನ್ನು ತಡೆಹಿಡಿಯಬೇಕೂ ಮತ್ತು ಈ ಬಗ್ಗೆ ವಿಚಾರಣೆ ಮಾಡಬೇಕು ಎಂದು ತಾವು ಏನು ಸಲಹೆ ಮಾಡಿದ್ದೀರಿ. ಇದನ್ನು ಅಡ್ವಕೇಟ್ ಜನರಲ್ ಚೀಫ್-ಸೆಕ್ರೆಟರಿ ಅವರ ಗಮನಕ್ಕೆ ತರುತ್ತೇವೆ ಮತ್ತು ಈ ಬಗ್ಗೆ ಸರ್ಕಾರ ಅವರಿಗೆ ಅಡ್ವೈಜ್ ಮಾಡುತ್ತದೆ.